ಸೋರುತ್ತಿದೆ. ಅಂಥ ಕಟ್ಟಡ ಸುಸ್ಥಿತಿಯಲ್ಲಿದೆ ಎನ್ನುತ್ತಾರೆ. ತಮಗೆ ಸರಿಯಾದ ವರದಿ ಸಿಕ್ಕಿಲ್ಲ ಮತ್ತು ತಮ್ಮ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಹಾಗೂ ಈಗಾಗಲೇ ಮಂಜೂರಾಗಿರುವ ಭಟ್ಕಳ ,ಇಡಗುಂಜಿ ಹಾಸ್ಟೆಲ್‌ಗಳನ್ನು ಗುತ್ತಿಗೆಗೆ ತೆಗೆದುಕೊಂಡು 3 ವರ್ಷಗಳಾಗಿ ಕೆಲಸ ನಡೆಯುತ್ತಿದೆ. ಇಲ್ಲಿವರೆಗೆ ಪೂರ್ಣ ಮಾಡಿಲ್ಲ. ಅದನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಉಳಿದ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡವನ್ನು ಯಾವಾಗ ಒದಗಿಸುತ್ತೀರಿ? ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ತಾವು ಹತ್ತೂವರೆ ಲಕ್ಷ ರೂಪಾಯಿ ಇದೆ ಎಂದು ಹೇಳಿದ್ದೀರಿ. ಅದನ್ನು ಅವಶ್ಯಕತೆ ಬಿದ್ದರೆ ಖರ್ಚು ಮಾಡುತ್ತೇವೆನ್ನುತ್ತೀರಿ. ಈ ರೀತಿ ಸೋರುತ್ತಿರುವ ಕಟ್ಟಡಕ್ಕೆ ಅವಶ್ಯಕತೆ ಇಲ್ಲವೇ? ಅದನ್ನು ಯಾವಾಗ ನೀವು ಸರಿಪಡಿಸುತ್ತೀರಾ ಎಂಬ ಬಗ್ಗೆ ಸ್ಪಷ್ಟ ಉತ್ತರವನ್ನು ನೀಡಬೇಕು.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್:- ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಈಗಾಗಲೇ ಉತ್ತರ ನೀಡಿದ್ದೇನೆ. ಈಗ ಅಲ್ಲಿ ಕಟ್ಟಡಗಳು ಸೋರುತ್ತಿವೆ ಎಂಬ ಮಾಹಿತಿ ನೀಡಿದ್ದಾರೆ, ಕಾರವಾರ ಜಿಲ್ಲೆಯಲ್ಲಿ ಈಗಾಗಲೇ ನಾನು 10ಲಕ್ಷ 50 ಸಾವಿರ ರೂಪಾಯಿಗಳನ್ನು ನಿಗದಿಪಡಿಸಿದ್ದೇನೆ. ಆ ಕೆಲಸ ತೆಗೆದುಕೊಳ್ಳಲು ಹೇಳುತ್ತೇನೆ. ಜೊತೆಗೆ 5 ಬಾಡಿಗೆ ಕಟ್ಟಡಗಳ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದು, ನಿಮ್ಮ ಗಮನಕ್ಕೆ ತರಬೇಕಾದರೆ, ನಮ್ಮ ಸರ್ಕಾರ ಬಂದ ನಂತರ ಸುಮಾರು 1291 ಹಾಸ್ಟೆಲ್‌ಗಳು ಏನು ನಡೆಯುತ್ತಿವೆ ಅದರಲ್ಲಿ ಸುಮಾರು 562 ಹಾಸ್ಟೆಲ್‌ಗಳಲ್ಲಿ ಕಟ್ಟಡ ಕಟ್ಟಿ ಪೂರ್ಣ ಮಾಡಿದ್ದು, 533ರಲ್ಲಿ 233 ಹಾಸ್ಟೆಲ್‌ಗಳನ್ನು ಕಟ್ಟಿ ಪೂರ್ಣಮಾಡಿ ಉದ್ಘಾಟನೆ ಮಾಡಿದ್ದೇವೆ. ಇನ್ನೂ 78 ಕಟ್ಟಡಗಳು ಕಾಮಗಾರಿಯ ಹಂತದಲ್ಲಿವೆ. ಅದರಲ್ಲಿ ಕೂಡ ಅದೂ ಒಂದು ಸೇರಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಅದನ್ನು ಈ ವರ್ಷವೇ ಮುಗಿಸಲು ಎಲ್ಲಾ ಹಣಕಾಸಿನ ವ್ಯವಸ್ಥೆ ಮಾಡುತ್ತಿದ್ದೇನೆ. ಇನ್ನುಳಿದ ಹಾಸ್ಟೆಲ್‌ಗಳಿಗೆ ಕೂಡ ಆಯವ್ಯಯದಲ್ಲಿ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂಬುದನ್ನು ಪರಿಶೀಲಿಸಿ ನಿಮ್ಮ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುತ್ತೇನೆ.

11.40 ಎ.ಎಂ.

ಶ್ರೀ ಶಿವಾನಂದ ನಾಯಕ್: ಭಟ್ಕಳದಲ್ಲಿ ಕಟ್ಟಡ ಮುಗಿಯುವ ಹಂತದಲ್ಲಿದೆ, ಕುಡಿಯುವ ನೀರಿನ ಯೋಜನೆ, ವಿದ್ಯುತ್ ಸರಬರಾಜು ಕೆಲಸ ಆಗಲಿಲ್ಲ, ಈ ಕೆಲಸವನ್ನು ತಕ್ಷಣ ಮಾಡಬೇಕು, ಏಕೆಂದರೆ, ಈಗಾಗಲೇ ನಾವು ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ. ಒಂದೆರಡು ತಿಂಗಳಲ್ಲಿ ಹಾಸ್ಟೆಲ್ ಸರಿಮಾಡಿಸಿಕೊಟ್ಟರೆ ಹುಡುಗರನ್ನು ಭರ್ತಿಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಆದಷ್ಟು ಬೇಗ ಗಮನ ಹರಿಸುತ್ತೇನೆ.
ಮಂಗಳೂರು ಕೋಡಿಯಾಲ ಬಯಲಿನಲ್ಲಿರುವ ಅಂಬೇಡ್ಕರ್ ಭವನ ನಿರ್ಮಾಣ
244 (1684)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ಮಂಗಳೂರಿನ ಉಳಾರ ಮಾರ್ಕೆಟ್ ವೇಲ್ಸ್ ಪೇಟೆಯ ಬಳಿ ಇರುವ ಪರಿಶಿಷ್ಟ ವಿದ್ಯಾರ್ಥಿಗಳಿರುವ ವಿದ್ಯಾರ್ಥಿನಿಲಯ ನಿರ್ಮಾಣಕಾರ್ಯ ಯಾವ ಹಂತದಲ್ಲಿದೆ, ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚ ಎಷ್ಟು?

(ಆ) ಮಂಗಳೂರು ಕೋಡಿಯಾಲ ಬಯಲಿನಲ್ಲಿರುವ ಅಂಬೇಡ್ಕರ್ ಭವನದ ಕಟ್ಟಡ ನಿರ್ಮಾಣ ಕಾರ್ಯವನ್ನು ಯಾವಾಗ ಪೂರ್ತಿಗೊಳಿಸಲಾಗುವುದು? ಇದಕ್ಕೆ ತಗಲುವ ವೆಚ್ಚ ಎಷ್ಟು?ಹಾಗೂ ಈ ಬಗ್ಗೆ ಸರ್ಕಾರ ಬಿಡುಗಡೆ ಮಾಡಿದ ಮೊಬಲಗು ಎಷ್ಟು?

ಶ್ರೀ. ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು.) :

(ಅ) ಮಂಗಳೂರು ಮಹಾ ನಗರಪಾಲಿಕೆಯು ಶೇ.18ರ ಹಣದಲ್ಲಿ ಊವಾರ ಮಾರ್ಕೆಟ್‌ವೇಲ್ಸ್ ಪೇಟೆಯಲ್ಲಿ ನಿರ್ಮಿಸಿರುವ ಪರಿಶಿಷ್ಟಜಾತಿ ವಿದ್ಯಾರ್ಥಿನಿಲಯದ ಕಟ್ಟಡದ ನೆಲಅಂತಸ್ತು ಮುಗಿದಿದ್ದು ಮೊದಲ ಅಂತಸ್ತಿನ ಕಾಮಗಾರಿ ಅರ್ಧದಲ್ಲೆ ನಿಂತಿರುತ್ತದೆ. ಈ ಕಟ್ಟಡವನ್ನು ಪೂರ್ಣಗೊಳಿಸುವ ಸಲುವಾಗಿ ಜಿಲ್ಲಾ ಪಂಚಾಯತಿಯು ಲೋಕೋಪಯೋಗಿ ಇಲಾಖೆಯು ತಯಾರಿಸಿರುವ 14.00ಲಕ್ಷ ರೂ.ಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಕೋರಿದ್ದು ಅದರಂತೆ ಸರ್ಕಾರಿ ಆದೇಶ ಸಂಖ್ಯೆ. ಸಕಇ 137 ಪಕವಿ 96ದಿನಾಂಕ 22-1-98ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದುದಲ್ಲದೆ, 3.32 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಉಳಿದಿದ್ದ 10.68ಲಕ್ಷ ರೂ ಗಳನ್ನು ಇದಕ್ಕೆ ಉಪಯೋಗಿಸಲು ಸೂಚಿಸಲಾಯಿತು. ಆದಾಗ್ಯೂ ಹಾಲಿ ಇರುವ ಕಟ್ಟಡವು ಶಿಥಿಲವಾಗಿದ್ದು ವಾಸಕ್ಕೆ ಯೋಗ್ಯವಿಲ್ಲದಿರುವುದರಿಂದ ಕಾಮಗಾರಿಯನ್ನು ಮುಂದುವರೆಸದಿರಲು ಹಾಗೂ ಯಥಾಸ್ಥಿತಿಯಲ್ಲಿ ಇದನ್ನು ನಗರಪಾಲಿಕೆಗೆ ಹಿಂದಿರುಗಿಸಲು ಜಿಲ್ಲಾ ಪಂಚಾಯತಿಯು ದಿನಾಂಕ 4-12-98ರಲ್ಲಿ ತೀರ್ಮಾನಿಸಿರುತ್ತದೆ. ಈ ಸಂಬಂಧ ನಗರಪಾಲಿಕೆಯು ನಿರ್ಧಾರ ತೆಗೆದುಕೊಳ್ಳಬೇಕಿದೆ!

(ಆ) ಮಂಗಳೂರು ನಗರದ ಕೋಡಿಯಾಲ ಬಯಲಿನಲ್ಲಿ ಅಂಬೇಡ್ಕರ್ ಭವನದ ಕಟ್ಟಡ ಕಾಮಗಾರಿಕೆಯನ್ನು ದಿನಾಂಕ 2-2-95ರಂದು ಪ್ರಾರಂಭಿಸಿರುವುದಾಗಿಯೂ, ನಿವೇಶನದ ಟೋಪೋಗ್ರಫಿಗೆ ಅನುಗುಣವಾಗಿ ಕಟ್ಟಡದ ನಕ್ಷೆಯನ್ನು ತಯಾರಿಸಿದ್ದು ಅದರಂತೆ ಮುಂದಿನ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭದಲ್ಲಿ ವಾಣಿಜ್ಯ ಮಳಿಗೆಯನ್ನು ರೂ.77.40ಲಕ್ಷಗಳ ಅಂದಾಜುವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆಯೆಂದು ಇದರ ಮೇಲೆ ಅಂಬೇಡ್ಕರ್ ಭವನದ ಕಟ್ಟಡ ನಿರ್ಮಾಣವಾಗಬೇಕಾಗಿದ್ದ ಒಟ್ಟು ಅಂದಾಜುವೆಚ್ಚ 1995ರಲ್ಲಿದ್ದಂತೆ ರೂ. 156.00 ಲಕ್ಷಗಳೆಂದು ತಿಳಿಸಿ, ಈ ಭವನದ ನಿರ್ಮಾಣಕ್ಕೆ ಇನ್ನೂ ರೂ.78.60ಲಕ್ಷಗಳ ಅವಶ್ಯಕತೆ ಇದ್ದು ಹಣದ ಕೊರತೆಯಿಂದ ಭವನದ ಕಾಮಗಾರಿಕೆ ಪ್ರಾರಂಭವಾಗಿಲ್ಲವೆಂದು ಹಾಗೂ ಹಣದ ಲಭ್ಯತೆ ಆಧಾರದ ಮೇಲೆ ಭವನದ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದೆಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ದಿನಾಂಕ 17-6-99ರಂದು ವರದಿ ಮಾಡಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ. ಸಕಇ 364 ಪಕವಿ 95 ದಿನಾಂಕ 22-12-95ರಲ್ಲಿ ಮಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ ಧನಸಹಾಯ ರೂಪದಲ್ಲಿ ರೂ. 10.00ಲಕ್ಷಗಳನ್ನು ನೀಡಲು ನಿರ್ದೇಶಿಸಿದ್ದು, ಅದರಂತೆ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎನ್.ಯೋಗೀಶ್ ಭಟ್:- ಅಧ್ಯಕ್ಷರೆ, ಸುಮಾರು ಐದು ವರ್ಷಗಳಿಂದ ನಾನು ಇದೇ ಪ್ರಶ್ನೆಯನ್ನು ಬೇರೆ ಬೇರೆ ರೂಪದಲ್ಲಿ ಕೇಳುತ್ತಿದ್ದೇನೆ. 23ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪರಿಶಿಷ್ಟಜಾತಿಯ ವಿದ್ಯಾರ್ಥಿಗಳಿರುವ ವಿದ್ಯಾರ್ಥಿನಿಲಯ ಯಾವುದು ಇದೆ, ಅದು ಇವತ್ತಿಗೂ

ಉಪಯೋಗ ಮಾಡುವ ಸ್ಥಿತಿಯಲ್ಲಿಲ್ಲ. ಕಳೆದ ಏಳೆಂಟು ವರ್ಷಗಳಿಂದ ಇದೇ ದುಸ್ಥಿತಿಯಲ್ಲಿ ಆ ಕಟ್ಟಡ ಇದೆ. ಕಳೆದ ನಾಲ್ಕು ವರ್ಷಗಳಲ್ಲಿ ನಾಲ್ಕು ಮಂತ್ರಿಗಳಾದ ಮಾನ್ಯ ಕೃಷ್ಣಾರೆಡ್ಡಿಯವರು, ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು, ಮಾನ್ಯ ಜಯಪ್ರಕಾಶ್ ಹೆಗಡೆಯವರು, ಮಾನ್ಯ ಮೊಯಿದ್ದೀನ್‌ರವರು, ಅಲ್ಲಿಗೆ ಬಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೂ ಆ ಕಟ್ಟಡ ಇನ್ನೂ ಪೂರ್ಣವಾಗಿ ರಿಪೇರಿಯಾಗುವುದಕ್ಕೆ ಸಾಧ್ಯವಾಗಿಲ್ಲ. ಯಾವ ಕಾರಣಕ್ಕಾಗಿ ಇದು ಆಗಿಲ್ಲವೋ ನನಗೆ ಗೊತ್ತಿಲ್ಲ. ಸಚಿವರು ಉತ್ತರದಲ್ಲಿ ವಾಸಕ್ಕೆ ಯೋಗ್ಯವಿಲ್ಲದ ಕಟ್ಟಡ ಎಂದು ಉತ್ತರಿಸಿದ್ದಾರೆ. 23ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿಕೊಂಡು ಇನ್ನೂ ಪೂರ್ಣಗೊಳಿಸಲಿಕ್ಕೆ ಆಗಲಿಲ್ಲವೆಂದರೆ ಏನರ್ಥ? ಇವತ್ತು ನೂರಾರು ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದಿಂದ ನಮ್ಮನ್ನು ಸಂಪರ್ಕ ಮಾಡಿ ಹಾಸ್ಟೆಲ್‌ನ್ನು ರಿಪೇರಿ ಮಾಡಿಸಿದರೆ ನಮಗೆ ಅಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಕೇಳುತ್ತಿದ್ದಾರೆ. ಆದ್ದರಿಂದ, ಯಾವ ಕಾರಣಕ್ಕೋಸ್ಕರ ಇದು ಪೂರ್ಣವಾಗಿಲ್ಲ, ಯಾವಾಗ ಪೂರ್ಣ ಮಾಡುತ್ತೀರಿ, ಇದರ ಬಗ್ಗೆ ತನಿಖೆ ಏನಾದರೂ ತಾವು ಮಾಡಿದ್ದೀರಾ? ಎಂಬತ್ಯಾದಿ ಬಗ್ಗೆ ತಾವು ವಿವರಣೆ ನೀಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಂಗಳೂರಿನಲ್ಲಿ ನಗರಪಾಲಿಕೆಯ ವತಿಯಿಂದ ಐದು ವರ್ಷದ ಕೆಳಗೆ ಶೇಕಡ 18ರ ಹಣದಲ್ಲಿ ಈ ಕಟ್ಟಡ ಕಟ್ಟುವುದಕ್ಕೆ ಪ್ರಾರಂಭಿಸಿದರು. ಈ ಕಟ್ಟಡ ಯಾವ ಸ್ಥಿತಿಯಲ್ಲಿ ಇದೆ ಎಂದರೆ, ಎಷ್ಟು ಶಿಥಿಲವಾಗಿದೆ ಎಂದರೆ, ಅದರ ಮೇಲೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಆ ಕಟ್ಟಡವನ್ನು ಕೆಡವಲೇ ಬೇಕಾಗಿದೆ. ನಾನೂ ಕೂಡ ಮಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಈ ಕಟ್ಟಡವನ್ನು ನೋಡಿ ಪರೀಕ್ಷೆ ಮಾಡಿದ್ದೇನೆ. ಲೋಕೋಪಯೋಗಿ ಇಲಾಖೆಯಿಂದ ಕಟ್ಟಿರತಕ್ಕಂಥ ಈ ಕಟ್ಟಡವನ್ನು ಕೆಡವಿ ಬೇರೆ ಕಟ್ಟಡವನ್ನು ಕಟ್ಟಬೇಕಾಗುತ್ತದೆ. ನಾನು ಈ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ಸಂಪೂರ್ಣವಾದ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಆ ಕಟ್ಟಡವನ್ನು ನಗರ ಪಾಲಿಕೆಯವರು ತೆಗೆದುಕೊಳ್ಳಬೇಕಾಗುತ್ತದೆ, ಪುನರ್ ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ ಇಲ್ಲದಿರುವುದರಿಂದ ಈ ವರ್ಷದಲ್ಲಿ ನಮ್ಮ ಇಲಾಖೆಯ ವತಿಯಿಂದ ಅಲ್ಲೊಂದು ಕಟ್ಟಡ ಕಟ್ಟುವುದಕ್ಕೆ ಮಂಜೂರಾತಿ ಕೊಡುತ್ತೇನೆಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಇದರ ಬಗ್ಗೆ ತನಿಖೆ ನಡೆಸುತ್ತೀರಾ? ಇದಕ್ಕೆ ಸಂಬಂಧಿಸಿದ ಗುತ್ತಿಗೆದಾರರಿರಲಿ. ಅಧಿಕಾರಿಗಳಿರಲಿ ಇವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಈ ಕಟ್ಟಡ ನಗರ ಪಾಲಿಕೆಯ ವತಿಯಿಂದ ನಿರ್ಮಾಣವಾಗುತ್ತಿದ್ದು, ಜಿಲ್ಲಾ ಪಂಚಾಯಿತಿಯವರು ಸಂಪೂರ್ಣವಾಗಿ ಕಟ್ಟಡವನ್ನು ಯಥಾಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಿಂದಿರುಗಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಇದರ ಬಗ್ಗೆ ಜಿಲ್ಲಾ ಪಂಚಾಯತ್‌ರವರಿಗೆ ಸೂಕ್ತ ನಿರ್ದೇಶನ ಕೊಟ್ಟು ಇದಕ್ಕೆ ಕಾರಣರಾದವರ್ಯಾರು ಅವರ ಮೇಲೆ ಜವಾಬ್ದಾರಿ ಹೊರಿಸಿ ತಕ್ಷಣ ಮಾಹಿತಿ ಕಳುಹಿಸಿಕೊಡುವಂತೆ ಹೇಳುತ್ತೇನೆ. ನಂತರ ತಮಗೆ ಮಾಹಿತಿ ಒದಗಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಇದನ್ನು ವರ್ಗಾಯಿಸುತ್ತಿದ್ದಾರೆ. ಮತ್ತೊಂದು ಪ್ರಶ್ನೆ ಏನೆಂದರೆ, ಅಂಬೇಡ್ಕರ ಭವನ ಕಟ್ಟಡ ಕಟ್ಟಲು 1995ರಲ್ಲಿ

ಪ್ರಾರಂಭಗೊಂಡರೂ ಇವತ್ತಿನವರೆವಿಗೂ ಪೂರ್ಣಗೊಂಡಿಲ್ಲ. ಇದಕ್ಕೆ ಸಚಿವರು ಉತ್ತರದಲ್ಲಿ ಇನ್ನೂ 78 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಾರೆ. ತಾವು ಕೇವಲ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವುದು ಸರಿಯಲ್ಲ 78ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎಂದು ಈ ಮೂಲಕ ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣರೆಡ್ಡಿ : ಜಿಲ್ಲಾ ಮಟ್ಟದಲ್ಲಿ ಕೆಲವು ಕಡೆ ಸರ್ಕಾರದ ಆದೇಶ ಇಲ್ಲದಿದ್ದರೂ ಅವರದೇ ಆದ ಅಂದಾಜು ವೆಚ್ಚವನ್ನು ಅವರೇ ಮಾಡಿಕೊಂಡಿದ್ದಾರೆ. ನಾವು ಎಲ್ಲಾ ಕ್ಷೇತ್ರಗಳಿಗೂ ಐದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ, ವಿಶೇಷವಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದಕ್ಕೇನು ಕಾರಣ ಎಂದರೆ, ಕೆಲವು ಜಿಲ್ಲೆಗಳಲ್ಲಿ ಬೇರೆ ಬೇರೆ ವಲಯಗಳಿಂದ ಹಣವನ್ನು ತೆಗೆದುಕೊಂಡು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಅಂದಾಜನ್ನು ಮಾಡಿದ್ದಾರೆ. ನಮ್ಮಲ್ಲಿ ಹಣ ಇಲ್ಲ. ಅವರು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯಿಂದ ತಾಲ್ಲೂಕು ಪಂಚಾಯಿತಿಯಿಂದ ಬೇರೆ ಬೇರೆ ಸಂಸ್ಥೆಗಳಿಂದ ಹಣವನ್ನು ಕ್ರೋಢೀಕರಣ ಮಾಡಿ ಒಂದು ಯೋಜನೆಯನ್ನು ಮಾಡಿಕೊಂಡಿದ್ದಾರೆ. ನಾವು ಹತ್ತು ಲಕ್ಷ ಅನುದಾನವನ್ನು ಕೊಟ್ಟಿದ್ದೇವೆ. ಮಳಿಗೆಗಳನ್ನು ಕಟ್ಟಬೇಕು ಎಂದಾದ ಮೇಲೆ ಸರ್ಕಾರದ ವತಿಯಿಂದ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಹುಬ್ಬಳ್ಳಿಯ ಆನಂದ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

245 (1544)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಹುಬ್ಬಳ್ಳಿ ನಗರದ ದೊಡ್ಡ ಕೊಳಚೆ ಪ್ರದೇಶವಾದ ಆನಂದ ನಗರದ ಬಡಜನತೆ ಕುಡಿಯುವ ನೀರಿನ ಪೂರೈಕೆ ಇಲ್ಲದೆ ಬವಣೆ ಅನುಭವಿಸುತ್ತಿದ್ದು ಈ ಆನಂದ ನಗರಕೆರೆ ಕುಡಿಯುವ ನೀರು ಸರಬರಾಜು ಯೋಜನೆ ಕರಡು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?
2) ಹಾಗಿದ್ದಲ್ಲಿ ಅದನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ. ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು.):

1) ಹೌದು

2) ಹುಬ್ಬಳ್ಳಿ ನಗರದ ಆನಂದ ನಗರದ ಪ್ರದೇಶಕ್ಕೆ ನೀರಸಾಗರ ನೀರು ಸರಬರಾಜು ಯೋಜನೆಯ ಮುಖ್ಯ ಕೊಳವೆಯಿಂದ 1900ಮೀ. ಉದ್ದದ ಹೊಸ ಪಿ.ವಿ.ಸಿ.ಕೊಳವೆ ಮಾರ್ಗವನ್ನು ಆನಂದನಗರ ಪ್ರದೇಶದಲ್ಲಿರುವ ಹಾಲಿ ಇರುವ ಎರಡು ಒಂದು ಲಕ್ಷದ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಾಗಾರ ದವರೆಗೆ ಅಳವಡಿಸಿ, ಸದರಿ ನಗರದ ಜನತೆಗೆ ನೀರೊದಗಿಸಲು ರೂ. 9.90ಲಕ್ಷದ ಅಂದಾಜನ್ನು 1999-2000ರ ವಿಶೇಷ ಘಟಕ ಯೋಜನೆಯಡಿ ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು ಕಾಮಗಾರಿಯನ್ನು ಸಧ್ಯದಲ್ಲೇ ಕೈಗೆತ್ತುಕೊಳ್ಳಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ :- ಹುಬ್ಬಳ್ಳಿಯಲ್ಲಿ ಆನಂದ ನಗರ ಎನ್ನುವುದು ಬಹಳ ದೊಡ್ಡ ಕೊಳಚೆ ಪ್ರದೇಶ. ಈ ಒಂದು ಪ್ರದೇಶಕ್ಕೆ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಪ್ರಶ್ನೆ